ಕೃಷ್ಣರಾಜಪುರ ರೈಲು ನಿಲ್ದಾಣದಿಂದ ಹೋಫ್ ಫಾರಂವರೆಗೆ ರಸ್ತೆ ನಿರ್ಮಾಣ

ಳಳಿಸಿ. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಕೃಷ್ಣರಾಜಪುರ ರೈಲು ನಿಲ್ದಾಣದ ಹೋಫ್ ಫಾರಂವರೆಗಿನ ರಸ್ತೆ ನಿರ್ಮಾಣದ ಕೆಲಸ ಕಾರ್ಯಗಳಿಗಾಗಿ, ೧೯೮೭-೮೮ನೇ ಆಯವ್ಯಯದಲ್ಲಿ ನಿಗದಿಪಡಿಸಲಾಗಿದ್ದ ಹಣ ವೆಷ್ಟು ?

ಆ) ಆ ಪೈಕಿ ಈವರೆವಿಗೂ ಬಿಡುಗಡೆ ಮಾಡಿರುವ ಹಣ ವೆಷ್ಟು ಹಾಗೂ ವೆಚ್ಚವಾಗಿರುವ ಮೊತ್ತವೆಷ್ಟು?

ಇ) ಈ ರಸ್ತೆ ನಿರ್ಮಾಣ ಕಾರ್ಯ ಈಗ ಯಾವ ಹಂತದಲ್ಲಿದೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಸದರೀ ರಸ್ತೆಯು ೮.೬೦ ಕಿ. ಮೀ ಉದ್ದವಿದ್ದು ೬.೫೦ ಮೀಟರ್ ಅಗಲಕ್ಕೆ ಡಾಂಬರು ರಸ್ತೆಯಾಗಿದೆ. ಇದನ್ನು ಜೋಡಿ ರಸ್ತೆ ಮಾಡಲು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ೧೯೮೭-೮೮ನೇ ಸಾಲಿನ ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ಈ ಕೆಲಸವು ಸೇರಿದಂತೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ೯ ಕೆಲಸಗಳಿಗಾಗಿ ಒಟ್ಟಾರೆ ೯೫,೦೦೦ ರೂ.ಗಳ ಅನುದಾನವನ್ನು ತೋರ್ಪಡಿಸಲಾಗಿದೆ.

ಆ) ಮತ್ತು ಇ) ಈ ರಸ್ತೆಯು ಈಗ ಮುಖ್ಯ ಜಿಲ್ಲಾ ರಸ್ತೆಯಾಗಿದ್ದು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಈ ರಸ್ತೆಯನ್ನು ಜೋಡಿ ರಸ್ತೆ ಮಾಡುವುದಕ್ಕೆ ೧೪೧ ಲಕ್ಷ ರೂಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕೆಲಸವನ್ನು ೭ನೇ ಯೋಜನೆಯ ೇ ಅಂಡ್ ಐ ಕಾರ್ಯಕ್ರಮದಲ್ಲಿ ಮಂಜೂರು ಮಾಡಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದು, ಮಂಜೂರಾತಿ ದೊರೆತ ಮೇಲೆ ಕೆಲಸವನ್ನು ತೆಗೆದುಕೊಳ್ಳಲಾಗುವುದು.

ವಿದ್ಯಾಶುಲ್ಕ ಮಂತ್ರಿತರ ಶುಲ್ಕಗಳ ಹೆಚ್ಚಳ

ಳಳಿ೨. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರೌಢ ಶಿಕ್ಷಣ ಶಾಲೆಗಳ ವಿದ್ಯಾರ್ಥಿಗಳ ವಿಳಂಬ ಶುಲ್ಕ ಖಾಸಗಿ ವಿದ್ಯಾರ್ಥಿಗಳ ನೋಂದಣಿ ಶುಲ್ಕ ನೋಂದಣಿ ನವೀಕರಣ ಶುಲ್ಕ, ಪರೀಕ್ಷಾ ಮತ್ತು ಪುನರ್ ಎಣಿಕೆ ಶುಲ್ಕ ಮತ್ತು ಪರೀಕ್ಷಾ ಕೇಂದ್ರದ ವರ್ಗಾವಣೆ ಶುಲ್ಕವನ್ನು ಹೆಚ್ಚಿಸಲಾಗಿದೆಯೇ ? ಹಾಗಿದ್ದಲ್ಲಿ ಎಷ್ಟು ಶುಲ್ಕವನ್ನು ಹೆಚ್ಚಿಸಲಾಗಿದೆ ಯಾವಾಗಿನಿಂದ ಹಿಂದೆ ಇದ್ದ ಶುಲ್ಕ ಮತ್ತು ಈಗ ಹೆಚ್ಚಿಸಿರುವುದರ ಬಗ್ಗೆ ವಿವರಗಳನ್ನು ಒದಗಿಸುವುದು.

ಆ) ಈ ರೀತಿ ಶುಲ್ಕಗಳನ್ನು ಹೆಚ್ಚಿಸಿರುವುದಕ್ಕೆ ಕಾರಣಗಳೇನು ?

ಇ) ಈ ಶುಲ್ಕಗಳ ವಿರುದ್ಧ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಘಟಕ ಮಂತ್ರಿತರ ವಿದ್ಯಾರ್ಥಿ ಸಂಘಗಳು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ವ್ಯಕ್ತಪಡಿಸಿರುವುದು ನಿಜವೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಹೌದು

		೨೦ ವರ್ಷಗಳಿಗೂ ಹಿಂದೆ ನಿಗದಿಪಡಿಸಿದ ದರ	ಈಗ ಹೆಚ್ಚಿಸಿದ ದರ
			ಪ್ರತಿ ದಿನಕ್ಕೆ
೧)	ವಿಳಂಬ ಶುಲ್ಕ	...	ರೂ. ೧೦
೨)	ನೋಂದಣಿ ಶುಲ್ಕ	೫-೦೦	ರೂ. ೫೦
೩)	ನವೀಕರಣ ಶುಲ್ಕ	೨-೦೦	ರೂ. ೩೦
೪)	ಪರೀಕ್ಷಾ ವಾತ್ತು ಅಂಕಪಟ್ಟಿ ಶುಲ್ಕ	೩೦-೦೦	ರೂ. ೪೦
೫)	ಪುನರ್ ಎಣಿಕೆ ಶುಲ್ಕ (ಪ್ರತಿ ವಿಷಯಕ್ಕೆ)	೫-೦೦	ರೂ. ೧೦
	ಎಲ್ಲಾ ವಿಷಯಗಳಿಗೆ ರೂ.	೨೦-೦೦	ರೂ. ೫೦
೬)	ಪರೀಕ್ಷಾ ಕೇಂದ್ರದ ವರ್ಗಾವಣೆ ಶುಲ್ಕ	೫-೦೦	ರೂ. ೨೫

ಹೆಚ್ಚಿನ ಶುಲ್ಕಗಳನ್ನು ೧೯೮೮ರ ಮಾರ್ಚಿ ಪರೀಕ್ಷೆಯಿಂದ ಜಾರಿಗೆ ತರಲಾಗಿದೆ.

ಆ) ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ವೆಚ್ಚಗಳಲ್ಲೂ ಹೆಚ್ಚಳವಾಗಿರುವುದೇ ಇದಕ್ಕೆ ಕಾರಣ.

ಇ) ಇದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಎಲ್ಲಾ ಖಾಸಗಿ ಕಾಲೇಜುಗಳು ವಿದ್ಯಾ ಸಂಸ್ಥೆಗಳನ್ನು ಸರ್ಕಾರವೇ ವಹಿಸಿಕೊಳ್ಳುವ ಬಗ್ಗೆ

೭. ಶ್ರೀ ಆರ್. ವೆಂಕಟರಾಮಯ್ಯ (ಮಂಚಳಬಾಗಿಲು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಇಂಜಿನಿಯರಿಂಗ್ ವೃತ್ತಿಪರ ಹಾಗೂ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕ್ಯಾಪಿಟೇಷನ್ ಶುಲ್ಕ ತೆಗೆದುಕೊಳ್ಳುವುದನ್ನು ರದ್ದುಪಡಿಸಲು ಸರ್ಕಾರ ತೀರ್ಮಾನಿಸಿರುವುದು ನಿಜವೇ ?

ಆ) ರಾಜ್ಯದಲ್ಲಿನ ಎಲ್ಲಾ ಖಾಸಗಿ ಕಾಲೇಜುಗಳು ವಿದ್ಯಾ ಸಂಸ್ಥೆಗಳನ್ನು ಸರ್ಕಾರವೇ ವಹಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು) —

ಅ) ಕರ್ನಾಟಕ ವಿದ್ಯಾ ಸಂಸ್ಥೆಗಳ (ಕ್ಯಾಪಿಟೇಷನ್ ಫೀ ರದ್ದತಿ) ಕಾಯ್ದೆ ೧೯೮೪ರ ರನ್ವಯ, ರಾಜ್ಯದಲ್ಲಿನ ವಿದ್ಯಾ ಸಂಸ್ಥೆಗಳಲ್ಲಿ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುವುದನ್ನು ನಿಷೇಧಿಸಿದೆ. ಈ ಕಾಯ್ದೆಯಲ್ಲಿ ನಿಗದಿಪಡಿಸಿದ್ದ ೫ ವರ್ಷಗಳ ಅವಧಿ ಸಹ ದಿನಾಂಕ ೧೧-೭-೮೮ಕ್ಕೆ ಅಂತ್ಯಗೊಳ್ಳುತ್ತದೆ.

ಆ) ಇಲ್ಲ.